ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2026/920 ದಿನಾಂಕ : 31.07.2026

## ಸುತ್ತೋಲೆ

**ವಿಷಯ**:-2026-27ನೇ ಸಾಲಿನಲ್ಲಿ ಕವಿವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಸೇವೆ ಸಲ್ಲಿಸುತ್ತಿರುವ ಪ್ರಾಧ್ಯಾಪಕರ ವಿವರವಾದ ಮಾಹಿತಿಯನ್ನು ಪೂರೈಸುವ ಕುರಿತು

**ಉಲ್ಲೇಖ**:-ಕುಲಪತಿಗಳ ಆದೇಶ ದಿನಾಂಕ: 29.07.2026.

****

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ / ಸಂಯೋಜಕರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸನ್ 2026-27ನೇ ಸಾಲಿನ ವಿವಿಧ ಪರೀಕ್ಷಾ ಕಾರ್ಯಗಳನ್ನು ಜರುಗಿಸುವ ಸಲುವಾಗಿ ಎಲ್ಲಾ ಸ್ನಾತಕ ಪದವಿಗಳ, ಎಲ್ಲ ಡಿಪ್ಲೋಮಾ, ವಿಷಯವಾರು (Subject Wise) ಶಿಕ್ಷಕರ ಜೇಷ್ಠತಾ ಯಾದಿಯನ್ನು ತಯಾರಿಸಿ ಬಿ.ಓ.ಎಸ್. ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗಿರುತ್ತದೆ.

ಆದ್ದರಿಂದ, ತಮ್ಮ ಮಹಾವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಪ್ರಾಧ್ಯಾಪಕರುಗಳ 1 ರಿಂದ 6ನೇ ಸೆಮಿಸ್ಟರ ತರಗತಿಗಳನ್ನು ಬೋಧಿಸುತ್ತಿರುವ ಖಾಯಂ U.G.C./State Scale ಶಿಕ್ಷಕರ ಮಾಹಿತಿ ಹಾಗೂ Non-U.G.C (Full Time/Temporary/Part-time/Guest Faculty/Teaching Asst) ಶಿಕ್ಷಕರ ವಿಷಯವಾರು (Subject Wise) ಮಾಹಿತಿಯನ್ನು ಹೊಸದಾಗಿ ತಯಾರಿಸಲಾದ ಸಾಫ್ಟವೇರ್‌ನಲ್ಲಿ (Software) ಕಡ್ಡಾಯವಾಗಿ ಅಳವಡಿಸಿಕೊಂಡು ದಿನಾಂಕ: ೨೦.೦೮.೨೦೨೬ರ ಒಳಗಾಗಿ ನಮೂದಿಸುವುದು. ನಮೂದಿಸಿದ ನಂತರ ಅದರ ಒಂದು ಹಾರ್ಡ ಪ್ರತಿಯನ್ನು Hard Copy ದಿನಾಂಕ: 24.08.2026ರ ಒಳಗಾಗಿ ಪರೀಕ್ಷಾ ಗೌಪ್ಯ ವಿಭಾಗಕ್ಕೆ ಮುದ್ರೆ ಹಾಗೂ ಸಹಿಯೊಂದಿಗೆ ಲಗತ್ತಿಸಿ ಕಳುಹಿಸಲು ಈ ಮೂಲಕ ತಿಳಿಸಲಾಗಿದೆ.

ಅಲ್ಲದೇ ಯಾವುದೇ ಶಿಕ್ಷಕರ ಮಾಹಿತಿಯನ್ನು ಸಾಫ್ಟವೇರ್‌ನಲ್ಲಿ (Software) ನಮೂದಿಸದೇ ಹೋದಲ್ಲಿ ಮುಂದಿನ ಯಾವುದೇ ಕಾರಣಕ್ಕೂ ಪೆನಲ್‌ನಲ್ಲಿ ಸೇರಿಸಲು ಅವಕಾಶ ಇರುವುದಿಲ್ಲ. ಕಾರಣ ದಿವಂಗತರಾದ / ಬಿಟ್ಟು ಹೋದ ನಿವೃತ್ತಿ ಹೊಂದಿದ / ವರ್ಗಾವಣೆ ಹೊಂದಿದ ಹೆಸರುಗಳನ್ನು ಸಾಫ್ಟವೇರ್‌ನಲ್ಲಿ (Software) ನಮೂದಿಸಬಾರದು. ಹಾಗೂ ವರ್ಗಾವಣೆಯಾಗಿ ಬಂದವರ / ಹೊಸದಾಗಿ ನೇಮಕವಾದವರ ಹೆಸರುಗಳನ್ನು ಸಾಫ್ಟವೇರ್‌ನಲ್ಲಿ (Software) ಕಡ್ಡಾಯವಾಗಿ ನಮೂದಿಸಬೇಕು. (ಸಂಲಗ್ನ /ಸರಕಾರಿ / ಅನುದಾನಿತ /ಅನುದಾನ ರಹಿತ ಕಾಲೇಜುಗಳು) ತಪ್ಪಾದಲ್ಲಿ ತಾವು ಸಲ್ಲಿಸುವ ಮಾಹಿತಿಯು ಅಪೂರ್ಣ ಎಂದು ಪರಿಗಣಿಸಲಾಗುವುದು.

**"ಸದರಿ ಸಾಫ್ಟವೇರ್‌ನಲ್ಲಿ (Software) ಈ ಕೆಳಗಿನ ಲಿಂಕ್‌ನಲ್ಲಿ Open ಮಾಡಿ ಮಾಹಿತಿ ನಮೂದಿಸುವುದು."**

https://kudconfidential.aargees.org

ಪು.ತಿ.ನೋ

**ವಿಶೇಷ ಸೂಚನೆಗಳು:**

1. B Com/BBA (Logistics)/E-Commerce/ BCA ಸದರಿ ಕೋರ್ಸುಗಳ Odd Semester ನಲ್ಲಿ ನಾಲ್ಕು ವಿಷಯಗಳು /Even Semester ನಾಲ್ಕು ವಿಷಯಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವುದು. ನಾಲ್ಕಕ್ಕಿಂತ ಹೆಚ್ಚಿಗೆ ಆಯ್ಕೆ ಮಾಡಿಕೊಂಡಲ್ಲಿ ಅವುಗಳನ್ನು ಪರಿಗಣಿಸುವುದಿಲ್ಲ.

2. Non-UGC ಶಿಕ್ಷಕರುಗಳ ಸೇವೆಗೆ ಸೇರಿದ ದಿನಾಂಕಕ್ಕಿಂತ ಪೂರ್ವದಲ್ಲಿ & ಬೇರೆ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸಿದ್ದರೇ ಅಂತವರ ಸೇವಾ ಪ್ರಮಾಣ ಪತ್ರವನ್ನು ಪಡೆದು ಅವರ ಒಟ್ಟು ಸೇವೆಯನ್ನು ನಮೂದಿಸುವುದು.

3. Non-UGC ಶಿಕ್ಷಕರುಗಳ ಎರಡು ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಅಂತವರು ಕೇವಲ ಒಂದೇ ಕಾಲೇಜಿನಲ್ಲಿ ಅವರ ಹೆಸರುಗಳನ್ನು ಹಾಗೂ ಎರಡೂ ಮಹಾವಿದ್ಯಾಲಯಗಳಲ್ಲಿ ಕಲಿಸುವ ವಿಷಯಗಳನ್ನು ನಮೂದಿಸುವುದು.(2ನೇ ಮಹಾವಿದ್ಯಾಲಯದಿಂದ ಪತ್ರ ಪಡೆಯಬೇಕು)

4. UGC- State Scale ತೆಗೆದುಕೊಳ್ಳುವ ಖಾಯಂ ಪ್ರಾಧ್ಯಾಪಕರುಗಳು ಒಂದು ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಾ ಮತ್ತೊಂದು ಕಾಲೇಜಿಗೆ ನಿಯೋಜನೆ (Deputation)ಗೊಂಡಲ್ಲಿ ಅಂತವರ ಹೆಸರುಗಳನ್ನು, ವಿವರಗಳನ್ನು ಹಾಗೂ ಕಲಿಸುವ ವಿಷಯಗಳನ್ನು ಅವರು ಖಾಯಂ ಆಗಿ ಕಾರ್ಯ ನಿರ್ವಹಿಸುವ ಕಾಲೇಜಿನಲ್ಲಿ ಮಾಹಿತಿಗಳನ್ನು ನಮೂದಿಸುವುದು.

5. ತಮ್ಮ ಮಹಾವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ (UGC/ Non-UGC) ಶಿಕ್ಷಕರುಗಳ ವಿವರವಾದ ಮಾಹಿತಿಯ ದಾಖಲೆಗಳ ಪ್ರತಿಗಳನ್ನು ಸಹಿಯೊಂದಿಗೆ ಪಡೆದು ಮಾಹಿತಿ ನಮೂದಿಸುವುದು.

6. ಶಿಕ್ಷಕರುಗಳ Adhar Card /Pan Card / Bank ಖಾತೆಯ ವಿವರಗಳನ್ನು ನಮೂದಿಸುವಾಗ ಪರಿಶೀಲಿಸಿ ಸರಿಯಾಗಿ ನಮೂದಿಸತಕ್ಕದ್ದು, ಅವುಗಳನ್ನು ನಮೂದಿಸಿದ ನಂತರ ತಿದ್ದುಪಡೆ ಮಾಡಲು ಅವಕಾಶ ಇರುವುದಿಲ್ಲ.

31/03/2016

ಕುಲಸಚಿವರು(ಮೌಲ್ಯಮಾಪನ)

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ / ಸಂಯೋಜಕರುಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಕುಲಪತಿಗಳ/ಕುಲಸಚಿವರ/ ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕ.ವಿ.ವಿ. ಧಾರವಾಡ.
5. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.